12 (54) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಪ್ರತೀ ವರ್ಷವೂ ಅತಿ ಹೆಚ್ಚು ಮಳೆ ಹಾಗೂ ಇತರೆ ಪ್ರಕೃತಿ ವಿಕೋಪಗಳಿಂದಾಗಿ ಅಪಾರ ಆಸ್ತಿ–ಪಾಸ್ತಿ, ಬೆಳೆ ಜಾನುವಾರು ಹಾನಿ ಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, 2005–06, 2006–07ನೇ ಸಾಲಿನಲ್ಲಿ ಆದ ಹಾನಿಯ ಪ್ರಮಾಣವೆಷ್ಟು ಮತ್ತು ಕೈಗೊಂಡ ಪರಿಹಾರ ಕಾಮಗಾರಿಗಳಾವುವು ; (ಕ್ಷೇತ್ರವಾರು ವಿವರ ನೀಡುವುದು) ;

ಇ) 2005–06 ಮತ್ತು 2006–07ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ; (ಕ್ಷೇತ್ರವಾರು ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಬಂದಿದೆ

ಆ)

	2005–06	2006–07
1. ದಕ್ಷಿಣ ಕನ್ನಡ ಜಿಲ್ಲೆ		
ಜೀವಹಾನಿ	15	16
ಆಸ್ತಿಹಾನಿ	970	832
ಜಾನುವಾರು ಹಾನಿ	2	13
ಕಾಮಗಾರಿಗಳು	557	481
2. ಉಡುಪಿ		
ಜೀವಹಾನಿ	13	17
ಆಸ್ತಿಹಾನಿ	488	229
ಜಾನುವಾರು ಹಾನಿ	15	–
ಕಾಮಗಾರಿಗಳು	1016	703
3. ಉತ್ತರ ಕನ್ನಡ		
ಜೀವಹಾನಿ	8	21
ಆಸ್ತಿಹಾನಿ	55	3406
ಜಾನುವಾರು ಹಾನಿ	6	13
ಕಾಮಗಾರಿಗಳು	1064	669

ಇ) ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡುವುದಿಲ್ಲ. ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಲಾಗಿದೆ. ಪ್ರಕೃತಿ ವಿಕೋಪ ಪರಿಹಾರಕ್ಕೆ ಸರ್ಕಾರದಿಂದ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

2005–06 (ರೂ. ಲಕ್ಷಗಳಲ್ಲಿ)

ಜಿಲ್ಲೆ	ಪ್ರವಾಹ/ ಮಳೆಹಾನಿ ಪರಿಹಾರ	ಉದ್ಯೋಗ ಸೃಜನೆ	ಕುಡಿಯುವ ನೀರು	ಬೆಳೆ ಪರಿಹಾರ	ಒಟ್ಟು
ದಕ್ಷಿಣ ಕನ್ನಡ	750–20	–	25–00	–	775.20
ಉತ್ತರ ಕನ್ನಡ	1019.00	20.00	74.00	–	1113.00
ಉಡುಪಿ	1083.10	–	–	–	1083.10

2006–07 (ರೂ. ಲಕ್ಷಗಳಲ್ಲಿ)

ಜಿಲ್ಲೆ	ಪ್ರವಾಹ/ ಮಳೆಹಾನಿ ಪರಿಹಾರ	ಉದ್ಯೋಗ ಸೃಜನೆ	ಕುಡಿಯುವ ನೀರು	ಬೆಳೆ ಪರಿಹಾರ	ಒಟ್ಟು
ದಕ್ಷಿಣ ಕನ್ನಡ	550.00	–	10.00	–	560.00
ಉತ್ತರ ಕನ್ನಡ	750.0	–	30.00	44.38	824.38
ಉಡುಪಿ	400.00	–	10.00	–	410.00

13 (55) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯ ಹಣಕಾಸು ಸಂಸ್ಥೆಯ ಅಧಿಕಾರಿಗಳು ತಮ್ಮ ಬಂಧು–ಬಳಗ ಮತ್ತು ಪತ್ನಿಯ ಹೆಸರಿನಲ್ಲಿ ಖಾಸಗಿ ಹಣಕಾಸು ಸಂಸ್ಥೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈವರೆಗೂ ಸರ್ಕಾರವು ಕೈಗೊಂಡ ಕ್ರಮಗಳೇನು ?